

ಆಗೇ ತೀರುತ್ತದೆ!

'ವಿಚರಿ ಟೂರ್'ಗೆ ಬುಕ್ ಮಾಡಲು ಹೋದಾಗ 1 ಗಂಟೆಯಿಂದ ಎರಡೂವರೆ ಗಂಟೆಯವರೆಗಿನ ಹಲವು ಟೂರ್‌ಗಳು ಕಣ್ಣಿಗೆ ಬೀಳುತ್ತದೆ. ಐತಿಹಾಸಿಕ ನೆಲಮಾಳಿಗೆ, ಇಳಿದು ಕಂಡುಹಿಡಿಯಿರಿ (Descent & discover), ಎಡಿನ್‌ಬರೋ ರಾಜಮನೆತನದ ಅನುಭವ, ಹೀಗೆ ವಿಧ ವಿಧವಾದ ಶೀರ್ಷಿಕೆಯುಳ್ಳವು. ಇವೆಲ್ಲವೂ ಮೂಲಭೂತವಾಗಿ ಒಂದೇ ರೀತಿಯವು. ಇಬ್ಬರು ಗೈಡ್‌ಗಳು ಇವರಿಬ್ಬರೂ ನಾಟಕದ ಪಾತ್ರಧಾರಿಗಳು. ಚಿತ್ರವಿಚಿತ್ರ ವೇಷ, ಕೆಲವೊಮ್ಮೆ ಅಸ್ಥಿಪಂಜರ, ಮತ್ತೆ ಕೆಲವೊಮ್ಮೆ ಪ್ರೇತದಂತೆ ಬಿಳಿ/ಕರಿ ಬಣ್ಣ, ಉದ್ದ ನಿಲುವಂಗಿ, ಜೊತೆಗೆ ಸಾಹಿತ್ಯಿಕವಾದ ಇಂಗ್ಲಿಷ್ ಭಾಷೆ. ಒಂದು ರೀತಿಯಲ್ಲಿ ಇದು ನಡೆದಾಡುವ ನಾಟಕವೇ. ಪ್ರೇಕ್ಷಕರಿಗೆ ಕುರ್ಚಿಯನ್ನೂ ಹಾಕದೆ, ನಡೆಸಿಯೇ ನಾಟಕ ತೋರಿಸುವ, ಅವರನ್ನು ಒಳಗೊಳ್ಳುವ ನಾಟಕ! ಮಾಟ– ಮಂತ್ರಗಳ, ಕೊಲೆ– ಪ್ಲೇಗ್‌ಗಳ ರಾಜ– ರಾಣಿಯರ ರೋಚಕ ಕಥೆಗಳು. ಇನ್ನೇನು ಭಯಾನಕ ಎನಿಸುವಷ್ಟರಲ್ಲಿ ನಗೆ ಉಕ್ಕಿ ಬರುವಂತಹ ನಟನೆ ಸಂಭಾಷಣೆಗಳು.

ರಾಯಲ್ ಮೈಲ್ ಎಂಬ ಸ್ಥಳದಲ್ಲಿ ಇಚರಿ ಟೂರ್‌ಗಾಗಿ ಕಾಯುತ್ತಿರುವ ಗುಂಪುಗಳನ್ನು ಗುರುತಿಸಿ ಅವರೊಡನೆ ಕಾಯುವಾಗ ಹಠಾತ್ತನೆ ಯಾವ ಕಡೆಯಿಂದಲಾದರೂ ಈ ಭೂತ ಗೈಡ್‌ಗಳು ಬಂದೆರಗಬಹುದು. ನಿಮ್ಮ ಟೋಪಿ ಹಾರಿಸಬಹುದು, ಇವನೇ/ ಇವಳೇ ನನ್ನ ಪಾರ್ಟನರ್ ಎಂದು ಅಪ್ಪಿಕೊಳ್ಳಬಹುದು. ನಿಮ್ಮ ಮೇಲೆ ಭೂತದ ಕತೆಗಳ ಪುಸ್ತಕವೊಂದನ್ನು ಎಸೆಯಬಹುದು. ಮಧ್ಯೆ ಮಧ್ಯೆ ಸಂಭಾಷಣೆಯಲ್ಲಿ ನಿಮ್ಮನ್ನು ಚಿತ್ರ ವಿಚಿತ್ರವಾಗಿ ಕೂಗುವಂತೆ ಹೇಳಬಹುದು. ಇಲ್ಲಿ ಎಲ್ಲವೂ ಓಕೆ! ಆದರೆ ಗೈಡ್‌ಭೂತ ಕತ್ತಲೆಯ ಓಣಿಗಳಲ್ಲಿ ಸರಸರ ನಡೆದಂತೆ ಆತನನ್ನು ಹಿಂಬಾಲಿಸಿ ನಡೆಯುವ ಚುರುಕುತನ ನಮಗಿರಬೇಕು. ಮಕ್ಕಳೂ ಈ ವಿಚರಿ ಟೂರ್‌ಗಳಲ್ಲಿ ಆರಾಮವಾಗಿ ಭಾಗವಹಿಸಬಹುದು.

'ಬ್ರೂಸ್ ರಾಜನನ್ನು ಮೂರು ಬಾರಿ ಕೊಂದರು! ಮೊದಲ ದಿನ ಕೋಟೆಯ ಮೇಲಿಂದ ಕೆಳಕ್ಕೆಸೆದರು. ನಂತರ ಕೂದಲು ಹಿಡಿದು ಜಜ್ಜಿದರು. ಆಗ ಆತನ ಕೂದಲು, ಅದರ ಮೇಲಿನ ಟೋಪಿ, ಆಮೇಲೆ ಆತ ಹಾಕಿದ ಹೇರ್‌ಡೈ, ಶ್ಯಾಂಪೂ ಎಲ್ಲವೂ ಹೊರಬಂದವು! ಕೊನೆಯ ಬಾರಿ ಮೇಲಿನಿಂದ ಎಸೆದಾಗ ಆತ ಸತ್ತೇ ಹೋದ!'– ಇದು ಭೂತಗಳು ಹೇಳುವ ಕಥೆಯ 'ಸ್ಯಾಂಪಲ್'. ಈಗ ಓದುವಾಗ ಹೆದರಿಕೆಯ ಬದಲು ನಗುವೇ ಬಂದರೂ, ಆ ಕತ್ತಲೆಯ, ಮೌನದ ವಾತಾವರಣದಲ್ಲಿ ಹಾವಭಾವಗಳೊಂದಿಗೆ 'ಭೂತ'ವೇ ಬಂದು ಹೇಳತೊಡಗಿದಾಗ ಅಲ್ಪಸ್ವಲ್ಪ ಭಯವಂತೂ ಉಂಟಾಗದಿರಲು ಸಾಧ್ಯವೇ ಇಲ್ಲ. ಯಾವ್ಯಾವುದೋ ಗಲ್ಲಿಗಳಲ್ಲಿ ತಿರುಗಿ, 2 ಗಂಟೆಗಳ ವಾಕಿಂಗ್ ವಿಚರಿ ಟೂರ್ ಮುಗಿಸುವ ವೇಳೆಗೆ ಎಲ್ಲರಿಗೂ ನಕ್ಕೂ ನಕ್ಕೂ, ಬೆದರಿ ಬೆದರಿ, 'ಓ' ಎಂದು ವಿಚಿತ್ರವಾಗಿ ಕೂಗಿ ಸಾಕಾಗಿತ್ತು. ಮುಸ್ಸಂಜೆ 7ಕ್ಕೆ ಆರಂಭವಾದ ಮಾಟಮಂತ್ರಗಳ ಟೂರ್ 9 ಗಂಟೆಗೆ ಸೆಂಟ್‌ಗೈಲ್ಸ್ ಕ್ಯಾಥೆಡ್ರೆಲ್ ಮುಂದೆ ಮುಕ್ತಾಯವಾಗಿತ್ತು.

ನಮ್ಮ ಭೂತದ ಗೈಡ್ ಮಾತು, ನಟನೆ, ಒಂದಷ್ಟು ಪೇಂಟ್ ಇಷ್ಟನ್ನೇ ಬಂಡವಾಳ ಹಾಕಿ, ಪ್ರತಿಯೊಬ್ಬರಿಂದ 12 ಪೌಂಡ್ ವಸೂಲಿ (ಸುಮಾರು 1100 ರೂಪಾಯಿ) ಮಾಡಿಕೊಂಡ! ನಮ್ಮಲ್ಲೂ ಎಂಥ ರಂಗ ಕಲಾವಿದರಿದ್ದಾರೆ, ಎಂತೆಂಥ ಕಥೆಗಳಿವೆ, ನಿಜವಾದ ಇತಿಹಾಸವೂ ಇದೆ. ಇಂಥ ವಾಕಿಂಗ್ ಟೂರ್‌ಗಳನ್ನೇಕೆ ಮಾಡಬಾರದು?

